

ಶಶಿಕಲಾ: ಜೈಲು ಪಾಲು

ಮತ್ತು ದಿನಕರನ್ ಅವರನ್ನು ಪಕ್ಷದಿಂದ ಹೊರಹಾಕಲಾಯಿತು. ಷೇಕ್ಸ್‌ಪಿಯರ್‌ನ ಯಾವ ನಾಟಕಕ್ಕೂ ಕಡಿಮೆಯಿಲ್ಲದಂತೆ ನಡೆದ ತಮಿಳುನಾಡಿನ ಈ ಏರಿಳಿತದ ರಾಜಕೀಯ ನಾಟಕದಲ್ಲಿ, ಪ್ರಮುಖ ಪಾತ್ರ ವಹಿಸಲು ರಜನಿಕಾಂತ್ ಮತ್ತು ಕಮಲಹಾಸನ್ ಎಂಬ ಸೂಪರ್‌ಸ್ಟಾರ್‌ಗಳು ಸೈಡ್‌ವಿಂಗ್‌ನಲ್ಲಿ ಕಾಯುತ್ತಿರುವುದು ವರ್ಷದ ಕೊನೆಗೂ ಕುತೂಹಲವನ್ನು ಉಳಿಸಿಕೊಂಡಿದೆ.

2017ರಲ್ಲಿ ನಡೆದ ಒಟ್ಟು ಚುನಾವಣೆಗಳ ಹಿನ್ನೆಲೆಯಲ್ಲಿ ಮೂರು ಅಂಶಗಳನ್ನು ನಾವು 'ಹೈಲೈಟ್' ಎಂದು ಗುರುತಿಸಬಹುದು. ಚುನಾವಣೆ ಗೆಲ್ಲುವುದರಲ್ಲಿ ತಂತ್ರಗಾರಿಕೆಯೇ ಅತ್ಯಂತ ಪ್ರಮುಖ ಪಾತ್ರ ವಹಿಸುತ್ತದೆ ಎನ್ನುವುದನ್ನು ನರೇಂದ್ರ ಮೋದಿ ಮತ್ತು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಅಮಿತ್ ಷಾ ಎಂಬ 'ಭಲೇ ಜೋಡಿ' ಸಾಬೀತು ಪಡಿಸಿದ್ದು ಮೊದಲ ಹೈಲೈಟ್. ಈ ಜೋಡಿಯ ರಾಜಕೀಯ ಮೋಡಿ ಎಷ್ಟು ಪ್ರಬಲವಾಗಿದೆಯೆಂದರೆ, ಮುಂದಿನ ವರ್ಷ ನಡೆಯಲಿರುವ ವಿಧಾನಸಭೆಗಳ ಚುನಾವಣೆಯಲ್ಲೂ ಈ ಜೋಡಿ ಪ್ರಚಾರಸತ್ರದ ಮುಂಚೂಣಿಯಲ್ಲಿ ಇರುವುದು ನಿಶ್ಚಿತ. ಎರಡನೆಯ ಹೈಲೈಟ್ ಎಂದರೆ, ಕಾಂಗ್ರೆಸ್ ಪಕ್ಷದಲ್ಲಿ ಆದ ಬದಲಾವಣೆ. ಒಂದರ ಹಿಂದೆ ಒಂದರಂತೆ ರಾಜ್ಯಗಳಲ್ಲಿ ಅಧಿಕಾರವನ್ನು ಕಳೆದುಕೊಂಡು ದುರ್ಬಲವಾಗುತ್ತಿರುವ ಕಾಂಗ್ರೆಸ್‌ಗೆ ಈ ವರ್ಷ ರಾಹುಲ್ ಗಾಂಧಿ ಎಂಬ ಯುವನಾಯಕ ರಾಷ್ಟ್ರೀಯ ಅಧ್ಯಕ್ಷರಾಗಿ ಆಗಮಿಸಿದ್ದಾರೆ. ಕಳೆದ 19 ವರ್ಷಗಳಿಂದ ಅಧ್ಯಕ್ಷರಾಗಿ ಪಕ್ಷದ ಚುಕ್ಕಾಣಿ ಹಿಡಿದಿದ್ದ ಸೋನಿಯಾ ಗಾಂಧಿಯವರು ಅಧ್ಯಕ್ಷತೆಯನ್ನು ಮಗನಿಗೆ ಬಿಟ್ಟುಕೊಟ್ಟು ನಿರ್ಗಮಿಸಿದ್ದು ವರ್ಷದ ಬಹುದೊಡ್ಡ (ನಿರೀಕ್ಷಿತ) ಸುದ್ದಿ. ಈ 19 ವರ್ಷಗಳಲ್ಲಿ ಕಾಂಗ್ರೆಸ್ ಪಕ್ಷವನ್ನು ಎರಡು ಬಾರಿ ಕೇಂದ್ರದಲ್ಲಿ ಅಧಿಕಾರಕ್ಕೆ ತಂದು, ಸಂಕಷ್ಟದಲ್ಲಿದ್ದ ಪಕ್ಷಕ್ಕೆ ನವಚೇತನ ತುಂಬಿದ್ದು ಸೋನಿಯಾ ಅವರ ಬಹುದೊಡ್ಡ ರಾಜಕೀಯ ಸಾಧನೆಯೇ ಸರಿ. ಆದರೆ ಅವರು ಅಧ್ಯಕ್ಷ ಪದವಿಯನ್ನು ಮಗನಿಗೆ ಬಿಟ್ಟುಕೊಡುವ ಹಂತದಲ್ಲಿ ಪಕ್ಷದ ಸ್ಥಿತಿ ಅಷ್ಟೇನೂ ಉತ್ತಮವಾಗಿಲ್ಲ ಎನ್ನುವುದೂ ವಾಸ್ತವ. ಗುಜರಾತ್ ಚುನಾವಣೆಯಲ್ಲಿ ಕಾಂಗ್ರೆಸ್ ನಿರೀಕ್ಷೆಗೂ ಮೀರಿ 80 ಸ್ಥಾನಗಳನ್ನು ಗಳಿಸಿದ್ದು ಹೊಸ ಹೊಣೆಗಾರಿಕೆಯನ್ನು ಹೊರಲು ರಾಹುಲ್ ಗಾಂಧಿಗೆ ಇಮ್ಮಡಿ ವಿಶ್ವಾಸ ತುಂಬಿದೆ ಎನ್ನುವುದೂ ಸುಳ್ಳಲ್ಲ.

ಮೂರನೆಯ ಹೈಲೈಟ್, ಇರೋಮ್ ಶರ್ಮಿಳಾ ಎಂಬ ಹೋರಾಟಗಾರ್ತಿಯ ಸೋಲು. ಮಣಿಪುರದಲ್ಲಿ ನಾಗರಿಕ ಹಕ್ಕುಗಳ ದಮನ ನಿಲ್ಲಬೇಕು ಎಂದು ಆಗ್ರಹಿಸಿ 19 ವರ್ಷಗಳಿಂದ ಉಪವಾಸ ಸತ್ಯಾಗ್ರಹ ನಡೆಸುತ್ತಾ ಪದೇ ಪದೇ ಬಂಧನಕ್ಕೆ ಒಳಗಾಗುತ್ತಿದ್ದ, ಇಡೀ ರಾಜ್ಯದ ಕಣ್ಮಣಿ ಆಗಿದ್ದ ಇರೋಮ್ ಶರ್ಮಿಳಾ ಈ ವರ್ಷ ಉಪವಾಸ ಚಳವಳಿಯನ್ನು ಕೈಬಿಟ್ಟು ವಿವಾಹ ಬಂಧನಕ್ಕೆ ಒಳಗಾದರು. ಜತೆಗೇ 'ಪೀಪಲ್ಸ್ ರಿಸರ್ಜೆನ್ಸ್ ಅಂಡ್ ಜಸ್ಟಿಸ್ ಪಾರ್ಟಿ' ಎಂಬ ಪಕ್ಷ ಕಟ್ಟಿ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದರು. ಅವರ ಪಕ್ಷದ ಮೂವರು ಅಭ್ಯರ್ಥಿಗಳನ್ನೂ ಕಣಕ್ಕೆ ಇಳಿಸಿದರು. ಆದರೆ ಕೇವಲ 90 ಮತಗಳನ್ನು ಗಳಿಸಿ ಶರ್ಮಿಳಾ ದಯನೀಯ ಸೋಲು ಕಂಡದ್ದೂ ಅಲ್ಲದೆ, ಅವರ ಪಕ್ಷದ ಮೂವರೂ ಠೇವಣಿ ಕಳೆದುಕೊಂಡರು. ಪ್ರಜಾಪ್ರಭುತ್ವ ದೇಶವೊಂದರಲ್ಲಿ ನಾಗರಿಕ ಹಕ್ಕುಗಳಿಗಾಗಿ ಇಷ್ಟೊಂದು ಸುದೀರ್ಘ ಹೋರಾಟ ನಡೆಸಿಯೂ ಚುನಾವಣೆಯಲ್ಲಿ ಹೀಗೆ ದಯನೀಯ ಸೋಲು ಕಂಡದ್ದು, ಎಂದೂ ಮರೆಯಲಾಗದ ಇತಿಹಾಸವೊಂದನ್ನು ನಿರ್ಮಿಸಿತು.

## 2 ಬಾಹುಬಲಿಯ ಪುನರಾಗಮನ

ಭಾರತದ ಮನರಂಜನಾ ಉದ್ಯಮದ ಮಟ್ಟಿಗೆ 2017ರ ಬಹುದೊಡ್ಡ ಸಾಧನೆಯೆಂದರೆ 'ಬಾಹುಬಲಿ 2' ಸಿನಿಮಾ. 250 ಕೋಟಿ ರೂಪಾಯಿ ಖರ್ಚು ಮಾಡಿ ನಿರ್ಮಿಸಿದ ಈ 170 ನಿಮಿಷಗಳ ಮೆಗಾ ಸಿನಿಮಾ, ವರ್ಷದ ಕೊನೆಗೆ ಒಟ್ಟು 1700 ಕೋಟಿ ರೂಪಾಯಿಗಳನ್ನು ಬಾಕ್ಸಾಫೀಸ್‌ನಲ್ಲಿ ದೋಚಿದೆ ಎನ್ನುವುದು ಅಂದಾಜು. ತೆಲುಗು, ತಮಿಳು ಭಾಷೆಗಳಲ್ಲಿ ನಿರ್ಮಾಣವಾದ ಈ ಸಿನಿಮಾವನ್ನು ಬಳಿಕ ಹಿಂದಿ, ಮಲಯಾಳಂ ಮತ್ತು ಜಪಾನಿ ಭಾಷೆಗೂ ಡಬ್ ಮಾಡಲಾಯಿತು. ಭಾರತದಲ್ಲೇ ಅತಿ ದೊಡ್ಡ ಮಾರುಕಟ್ಟೆ ಹೊಂದಿರುವ ಹಿಂದಿ ಚಿತ್ರರಂಗವನ್ನೂ ತನ್ನ ಕಲೆಕ್ಷನ್ ಮೂಲಕ ಬೆಚ್ಚಿ ಬೀಳಿಸಿದ ಸಿನಿಮಾವಿದು. ಈ ಸಿನಿಮಾದ ಮೂಲಕ ನಿರ್ದೇಶಕ ಎಸ್.ಎಸ್.ರಾಜಮೌಳಿ ಮತ್ತು ನಾಯಕ ಪ್ರಭಾಸ್ ಭಾರತದಾದ್ಯಂತ ಮನೆಮಾತಾದರು. ಪೌರಾಣಿಕ ಕಥೆಯ, ಅತ್ಯುತ್ತಮ ಗ್ರಾಫಿಕ್ ತಂತ್ರಜ್ಞಾನ ಬಳಕೆಯ ಈ ಸಿನಿಮಾ ಭಾರತದ ಸಾರ್ವಕಾಲಿಕ ಅತ್ಯಧಿಕ ಗಳಿಕೆಯ ಸಿನಿಮಾ ಎಂಬ ದಾಖಲೆ ನಿರ್ಮಿಸಿತು.



ವಿಮರ್ಶಕರಿಂದಲೂ ಭಾರೀ ಮೆಚ್ಚುಗೆ ಗಳಿಸಿದ ಈ ಚಿತ್ರ ಮೆಲ್ಬೋರ್ನ್‌ನಲ್ಲಿ ನಡೆದ ಭಾರತೀಯ ಚಲನಚಿತ್ರೋತ್ಸವದಲ್ಲಿ ಮತ್ತು 39ನೇ ಮಾಸ್ಕೊ ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿ ಉದ್ಘಾಟನಾ ಚಿತ್ರವಾಗಿ ಪ್ರದರ್ಶನ ಕಂಡಿತು.

## 3 ರಾಮ್ ರಹೀಮ್ ಉಗ್ರಾವತಾರ

ಭಾರತದಲ್ಲಿ 'ದೇವಮಾನವ'ರಿಗೆ ಯಾವ ಕೊರತೆಯೂ ಇಲ್ಲ. ಸಾವಿರಾರು ಕೋಟಿ ರೂಪಾಯಿಗಳ ಸಂಪತ್ತನ್ನು ಗುಳೇ ಹಾಕಿಕೊಂಡು, ಆಧ್ಯಾತ್ಮದ ಹೆಸರಲ್ಲಿ ಲಕ್ಷಾಂತರ ಭಕ್ತ ಬೆಂಬಲಿಗರ ಪಡೆ ಕಟ್ಟಿಕೊಂಡು ಐಶಾರಾಮಿ ಬದುಕು ನಡೆಸುವ ಬಾಬಾಗಳು ಈ ಹಿಂದೆಯೂ ಈ ನೆಲದಲ್ಲಿ ಆಗಿಹೋಗಿದ್ದಾರೆ. ಈಗಾಗಲೆ ಕ್ರಿಮಿನಲ್ ಮೊಕದ್ದಮೆಗಳು ಹಿನ್ನೆಲೆಯಲ್ಲಿ ಹಲವರು ಜೈಲು ಪಾಲಾದದ್ದೂ ಇದೆ. ಈ ವರ್ಷ ಹೀಗೆ ಎಕ್ಸ್‌ಪೋಸ್ ಆಗಿ ಜೈಲಪಾಲಾದ ದೇವಮಾನವ ಗುರ್‌ಮೀತ್ ರಾಮ್ ರಹೀಮ್ ಸಿಂಗ್. ಹರಿಯಾಣದ ಪಂಚಕುಲಾದಲ್ಲಿ ತನ್ನದೇ ಆದ ದೇರಾ ಸಚ್ಚಾ ಸೌಧ ಎಂಬ ಅರಮನೆಯಂತಹ ಆಶ್ರಮವನ್ನು ಕಟ್ಟಿಕೊಂಡು ಮೆರೆಯುತ್ತಿದ್ದ

